VIJAYAKUMAR KANNUR
Digitally signed by VIJAYAKUMAR KANNUR
Date: 2026.03.07 10:52:58 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 06.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 5 ರವರ ಪರ ಶ್ರೀ ಟಿ ಸಿ ಬಿ ವಕೀಲರಿಂದ :**

ವಾದಿಯು ತನ್ನ ತಂದೆಯ ವಿರುದ್ದ ಹಾಗೂ ಇತರ ಸದಸ್ಯರ ವಿರುದ್ದ ದಾವೆ ದಾಖಲು ಮಾಡಿರುವಳು. ಒಟ್ಟು ಈ ದಾವೆಯನ್ನು 9 ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾಖಲು ಮಾಡಿರವರು. ದಾವಾ ಆಸ್ತಿಗಳು ಈ ಮೊದಲು ಕಿಡಿಯಪ್ಪನ ಹೆಸರಿನಲ್ಲಿ ಇದ್ದವು. ಇತ 04.08.2023 ರಂದು ಮೃತ ಪಟ್ಟಿರುವನು ಎಂದರೆ ಸರಿ . ಇತನಿಗೆ ವೆಂಕಪ್ಪ ಮತ್ತು ಸುರೇಶ ಎಂಬ ಇಬ್ಬರು ಮಕ್ಕಳು. ಕಿಡಿಯಪ್ಪನ ಹೆಂಡತಿ ಗೌರವ್ವ 2023 ರಲ್ಲಿ ಮೃತ ಪಟ್ಟಿರುವಳು ಎಂದರೆ ಸರಿ. ವಾದಿಯ ತಂದೆ ವೆಂಕಪ್ಪ ದಿಃ 10.08.2023 ರಂದು ಮೃತ ಪಟ್ಟಿರುವನು ಎಂದರೆ ಸರಿ. ವಾದಿ ವೆಂಕಪ್ಪನ ಮೊದಲ ಹೆಂಡತಿಯ ಮಗಳಾಗಿರುವಳು ಎಂದರೆ ಸರಿ. ವಾದಿಯ ತಾಯಿ ಶಾಂತವ್ವ 2013 ರಲ್ಲಿ ಮೃತ ಪಟ್ಟಿರುವಳು ಎಂದರೆ ಸರಿ.

2. ವಾದಿ ಮತ್ತು ಅವಳ ತಾಯಿ ಅಸಲು ದಾವಾ ನಂ. 154/2001 ರ ದಾವೆ ಪಾಲು ವಿಭಾಗ ಕೋರಿ ವೆಂಕಪ್ಪನ ವಿರುದ್ದ ದಾಖಲು ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದು. ಆ ದಾವೆ ಡಿಕ್ರಿಯಾಗಿರುವುದು ಎಂದರೆ ಸರಿ. ಅಸಲು ದಾವಾ ನಂ. 02/2014 ರ ದಾವೆ ಯಾರು ಯಾರ ವಿರುದ್ದ ಯಾವ ಪರಿಹಾರ ಕೋರಿ ದಾಖಲು ಮಾಡಿರವರು ಎಂದು ನನಗೆ ಗೊತ್ತಿರುವುದಿಲ್ಲ. ಆ ದಾವೆಯಲ್ಲಿನ ದಾವಾ ಆಸ್ತಿಗಳ ಸರ್ವೇ ನಂಬರ್ ನನಗೆ ಮಾಹಿತಿ ಇರುವುದಿಲ್ಲ. ಆದರೆ ಅವು ಮೂಲ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ದಾಖಲು ಮಾಡಿದ್ದರು. ಒಂದು ಎಕರೆಯ ಜಮೀನಿನ ಮಾರುಕಟ್ಟೆಯ ಬೆಲೆ ಸುಮಾರು ರೂ. 15 ಲಕ್ಷ ಇರುವುದು. ವಾದಿ ಕಿಡಿಯಪ್ಪನ ಮೊಮ್ಮಗಳಾಬೇಕು ಎಂದರೆ ಸರಿ. ನಾನು ಮತ್ತು ಪ್ರತಿವಾದಿ 1 ರವರು ಸ್ನೇಹಿತರು ಎಂದರೆ ಸರಿ. ನಾನು ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ